

# ಶಾಶ್ವತ ಪರಿಹಾರ ಶತಃಸಿದ್ಧ



ಸೂರ್ಯನಾರಾಯಣರಾವ್ ಎಂ.ವಿ.

ಬಂಧುಗಳೇ, ಪ್ರಸ್ತುತ ನನ್ನ ಅಂಕಣದಲ್ಲಿ ನನ್ನದೇ ಆದ ಸೂತ್ರವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಮೂಲಕ ಶಾಶ್ವತ ನೀರಾವರಿ ಹೇಗೆ ಎಂಬುದನ್ನು ತಿಳಿಸುತ್ತಿದ್ದೇನೆ. ನನ್ನ ಸೂತ್ರ, ಅಂತರಾಳ (ಭಾವನೆ) ಜೊತೆಗೆ ವಾಸ್ತವಿಕತೆಯನ್ನು (ಸಂಘರ್ಷ) ಕೂಡಿಸಿದರೆ ಶಾಶ್ವತ ಪರಿಹಾರ ನಿಶ್ಚಿತ.

ಸಮುದ್ರದ ನೀರು ಉಪಯೋಗಿಸಲಾಗದು, ನದಿಯ ನೀರು, ಅಂತರ್ಜಲ ಖಾಲಿಯಾಗಲೂಬಹುದು. ಆದ್ದರಿಂದ ನಮಗಿರುವ ಒಂದೇ ಒಂದು ದಾರಿ ಎಂದರೆ ಮಳೆಗಾಲದಲ್ಲಿ ದೊರೆಯುವ ನೀರನ್ನು ಮುಂದಿನ ಮಳೆಗಾಲದವರೆಗೆ ಬಳಕೆಗೆ ಬರುವಂತೆ ಉಳಿಸುವುದು ನಮ್ಮ ಪೂರ್ವಜರು ಕೆರೆ, ಕಟ್ಟೆ, ಕುಂಟೆ, ಗೋಕಟ್ಟೆ ಮತ್ತು ಕಲ್ಯಾಣಿಗಳೆಂಬ ನೀರು ಶೇಖರಣಾ ರಚನೆಗಳ ಮೂಲಕ ಇಡೀ ಪ್ರಾಣಿ ಸಂಕುಲದ ಬೆಳವಣಿಗೆಗೆ, ಪರಿಸರದ ಸಮತೋಲನಕ್ಕೆ, ನಮ್ಮ ಗ್ರಾಮೀಣ ಬದುಕಿನ ಬಹುತೇಕ ಎಲ್ಲಾ ಚಟುವಟಿಕೆಗಳಿಗೆ ಜೀವನಾಡಿಗಳನ್ನಾಗಿಸಿದ್ದರು.

**ಅಂತರಾಳ (ಭಾವನೆ):** ನಮ್ಮ ಸನಾತನ ಸಂಸ್ಕೃತಿಯಲ್ಲಿ ಪರಿಸರದ ಬಗ್ಗೆ ಜನತೆ ವಿಶೇಷವಾಗಿ ರೈತರು, ದೈವೀ ಸಂಬಂಧಗಳನ್ನು ಇಟ್ಟುಕೊಂಡು ವ್ಯವಹರಿಸುತ್ತಿದ್ದರು. ಪರಿಸರದ ಮೇಲೆ ಯಾವುದೇ ರೀತಿಯ ಶೋಷಣೆ ಮಾಡುತ್ತಿರಲಿಲ್ಲ. ಮರ, ಗಿಡ, ಬೆಟ್ಟ, ಗುಡ್ಡ, ಕೆರೆ, ನದಿ, ಗಾಳಿ, ಮಣ್ಣು ಎಲ್ಲವನ್ನು ದೈವಾಂಶದಿಂದ ಕೂಡಿದ್ದು ಎಂದು ಪೂಜಿಸಲಾಗುತ್ತಿತ್ತು. ಈ ದೈವಾಂಶ ಪರಿಪಾಠಕ್ಕೆ ವೈಜ್ಞಾನಿಕ ಹಿನ್ನಲೆಯಿತ್ತು. ಪೂರ್ವಜರಿಗೆ, ಋಷಿ ಮುನಿಗಳಿಗೆ ತಿಳಿದಿತ್ತು. ಸ್ವಾರ್ಥಿ ಮಾನವ ತನ್ನ ಅತ್ಯಲ್ಪ ಸುಖಕ್ಕಾಗಿ ಪರಿಸರದ ನಾಶಕ್ಕೆ ಕೈ ಹಾಕುತ್ತಾನೆ. ಉದಾಹರಣೆಗೆ ತಾಯಿ ಮಗುವಿಗೆ ನೀರನ್ನು ಹೆಚ್ಚಾಗಿ ಖರ್ಚು ಮಾಡಬಾರದು ಎಂದು ಎಷ್ಟೇ ಹೇಳಿದರೂ ಖರ್ಚಿನ ಪ್ರಮಾಣದಲ್ಲಿ ಹೆಚ್ಚಾಗುತ್ತಿರುತ್ತದೆಯೇ ವಿನಹ ಕಡಿಮೆಯಾಗುವುದಿಲ್ಲ. ಆದರೆ ತಾಯಿ ಮಗುವಿಗೆ ನೀರು ಎಂದರೆ ಗಂಗೆ, ದೈವಾಂಶ ಸಂಭೂತ ಗಂಗೆಯನ್ನು ಹಾಳು ಮಾಡಬಾರದು ಎಂದು ತಿಳಿಸಿದ ಕೂಡಲೇ ತಪ್ಪನ್ನು ತಿದ್ದಿಕೊಳ್ಳುವ ಕಾರ್ಯವಾಗುತ್ತದೆ. ಹೀಗೆ ಪೂರ್ವಜರು, ಋಷಿಗಳು ಪರಿಸರದ ವಿಚಾರದಲ್ಲಿ ದೈವಾಂಶವನ್ನು ತುಂಬಿಸುವ ಮೂಲಕ ಪರಿಸರವನ್ನು ಸಂರಕ್ಷಿಸಿದ್ದರು.

ಯಾವಾಗ ಭಾರತೀಯ ಸಂಸ್ಕೃತಿಯನ್ನು ಬಿಡುತ್ತ, ಬೇರೆ ಬೇರೆ ಇಸಂಗಳ, ಪಾಶ್ಚಿಮಾತ್ಯ ಸಂಸ್ಕೃತಿಗಳನ್ನು ಅನುಸುರಿಸವ ಮೂಲಕ ಪರಿಸರವನ್ನು ಭೋಗಿಸಲು ಹೊರಟೆವೋ ಆಗ ಪ್ರಾರಂಭವಾಗಿದ್ದು ನಾಶದ ಕಡೆಗೆ ಪಯಣ, ಅದರ ಪರಿಣಾಮವೇ ಪ್ರಸ್ತುತ ಎದುರಿಸುತ್ತಿರುವುದು ಮತ್ತು ಭವಿಷ್ಯದಲ್ಲಿ ಭೀಕರ, ಘೋರ ಪರಿಸ್ಥಿತಿ ಎದುರಾಗುವುದು ಸತ್ಯ. ಭಾರತೀಯರು ಆಧ್ಯಾತ್ಮೀಯ ಜೀವಿಗಳು, ಭಾರತದ ಆತ್ಮ ಆಧ್ಯಾತ್ಮ ಎಂದು ಸ್ವಾಮಿ ವಿವೇಕಾನಂದರ ಸ್ಪಷ್ಟವಾಗಿ ಒಂದು ಶತಮಾನದ ಹಿಂದೆಯೇ ತಿಳಿಸಿದ್ದರು.

ಪ್ರಸ್ತುತ ನೀರಾವರಿ ವಿಚಾರವಾಗಿ ಹೋರಾಟ, ಪ್ರತಿಭಟನೆ, ಬಂದ್‌ಗಳು, ಚರ್ಚೆಗಳು ನಡೆಯುತ್ತಿವೆ. ಇವುಗಳು ನಡೆಯುತ್ತಿರುವುದು ನಮ್ಮಗಳಿಗೆ ಪರಿಸರದ ಮೇಲಿರುವ ಕಾಳಜಿಯಿಂದಲೋ? ಅಥವಾ ನಮಗೆ ಈಗ ಕುಡಿಯಲು, ಕೃಷಿಗೆ ನೀರು ಬೇಕಂತಲೋ? ಏಕೆಂದರೆ ನಮ್ಮ ಅಂತರಾಳ (ಭಾವನೆ) ಸ್ಪಷ್ಟ ಹಾಗೂ ಸತ್ಯವಾಗಿದ್ದರೆ ಮಾತ್ರ ಶಾಶ್ವತ ಪರಿಹಾರ ಸಾಧ್ಯವಾಗುತ್ತದೆ. ಇಷ್ಟೆಲ್ಲಾ ನೀರಿನ ಸಮಸ್ಯೆ ಜನತೆ, ರೈತರು ಎದುರಿಸುತ್ತಿದ್ದರೂ, ಏಕೆ ತನ್ನ